# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 102/25

ಚಾ.ಸಾ.11

ಫ್ರಾ.ಸಾ. 5

| | | |
|---|---|---|
| ಸಾಕ್ಷಿದಾರರ ಹೆಸರು | – | ರೂಪಾ ಬಾಡಕರ್ |
| ತಂದೆಯ ಹೆಸರು | – | ಮಹಾಬಲೇಶ್ವರ ಬಾಡಕರ್ |
| ವಯಸ್ಸು | – | 54 ವರ್ಷ |
| ಉದ್ಯೋಗ | – | ಪ್ರಭಾರ ತಹಶೀಲ್ದಾರ ಗ್ರೇಡ್ –2, ಕಾರವಾರ |
| ವಾಸ್ತವ್ಯ | – | ಕಾರವಾರ |

(ಇಂದು ದಿನಾಂಕಃ 11–05–2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನಾನು ಜನವರಿ 2024 ರಿಂದ ಇಲ್ಲಿಯವರೆಗೆ ಪ್ರಭಾರ ತಹಶೀಲ್ದಾರ ಗ್ರೇಡ್ –2 ಆಗಿ ಕಾರವಾರದಲ್ಲಿ ಕರ್ತವ್ಯನಿರ್ವಹಿಸುತ್ತಿದ್ದೇನೆ. ದಿನಾಂಕ 17–08–2024 ರಂದು ನಾನು 6.45 ಗಂಟೆಗೆ ಕಚೇರಿಯಲ್ಲಿದ್ದಾಗ ಕಾರವಾರದ ಸೆನ್ ಪೊಲೀಸರು ಬಂದು ಗಾಂಜಾ ಹಿಡಿದಿದ್ದಾರೆ, ಪತ್ರಾಂಕಿತ ಅಧಿಕಾರಿ ಬರಬೇಕು ಎಂದು ಹೇಳಿದ್ದಾರೆ. ಕಾರವಾರದ ಸೇಂಟ್ ಮೈಕಲ್ ಶಾಲೆಯ ಹತ್ತಿರ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದಿದೆ ಎಂದು ತಿಳಿಸಿರುತ್ತಾರೆ. ನಾವು ಸ್ಥಳಕ್ಕೆ ಹೋದಾಗ ಒಬ್ಬ ವ್ಯಕ್ತಿಯನ್ನು ಹಿಡಿದುಕೊಂಡಿದ್ದು ಆತನ ಹೆಸರು ಸಾಹಿಲ್ ತಾಂಡೇಲ್ ಎಂದು ಗೊತ್ತಾಗಿದೆ.

**(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ